


ಎಂ. ವ್ಯಾಸ



ಕಿ.ರಂ. ನಾಗರಾಜ

ಕೃತಿಕಾರ ಸಾರ್ವಜನಿಕವಾಗಿ ಮಾತನಾಡಬೇಕೆಂದೇನೂ ಇಲ್ಲ. ತಾನೇನು ಮಾತನಾಡಿದರೂ ಅದು ಕೃತಿಯ ಮೂಲಕವೇ. ಕೃತಿಗಳ ಮೂಲಕವೇ ತನ್ನ ಅಂತರಂಗವನ್ನೂ ಬಹಿರಂಗವನ್ನೂ ಹೇಳಲು ಸಾಧ್ಯವಿದೆ ಎಂಬ ನಂಬಿಕೆ ಅವರಲ್ಲಿರುತ್ತದೆ. ಇಂಥವರು ಹಿಂದೆಯೂ ಇದ್ದರು. ಸಂಸರಂತಹ ನಾಟಕಕಾರರು ಹೇಳುವುದೆಲ್ಲವನ್ನೂ ನಾಟಕದ ಮೂಲಕವೇ ಹೇಳುತ್ತಿದ್ದರು. ಸೂಕ್ಷ್ಮ ಲೇಖಕ ಆ ರೀತಿಯಾದ ಸಂವಾದದ ನೆಲೆಯೊಂದನ್ನು ನಿರ್ಮಾಣ ಮಾಡುತ್ತಾನೆ. ಅಂತಹ ಲೇಖಕರಲ್ಲಿ ವ್ಯಾಸರು ವಿಶಿಷ್ಟರು. ತನ್ನ ಕೃತಿಗಳ ಸಂವಹನದಿಂದ ಮಾತ್ರ ತಾನು ಗುರುತಿಸಿಕೊಳ್ಳಬೇಕು ಎಂದು ಬಯಸಿದವರು ಅವರು. ವ್ಯಾಸರು ಸಮಕಾಲೀನವಾದ ಸಾಹಿತ್ಯ ಸಂದರ್ಭವನ್ನು ಗಂಭೀರವಾಗಿ ಸ್ವೀಕರಿಸಿದವರೇ ಅಲ್ಲ. ನಾವು ಅಂದುಕೊಳ್ಳುತ್ತಾ ಇರುತ್ತೇವೆ ಸಮಕಾಲೀನ ಸಾಹಿತ್ಯ ಚಳವಳಿಗಳಲ್ಲಿ ನಾವು ಬಹಳ ಕ್ರಿಯಾಶೀಲರಾಗಿ ಭಾಗವಹಿಸುತ್ತಾ ಇರಬೇಕು; ಅವುಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಮಾತ್ರ ತನ್ನ ವಿಚಾರವನ್ನು ಹೇಳಲು ಸಾಧ್ಯವಿದೆ ಎಂದು ಭಾವಿಸುತ್ತೇವೆ. ವ್ಯಾಸರ ಬರಹಗಳಲ್ಲಿ ಅವರ ಸಮಕಾಲೀನ ಲೇಖಕರ ಹೆಸರುಗಳೇ ಬರುವುದಿಲ್ಲ. ಎಲ್ಲೋ ಒಂದೆರಡು ಕಡೆ ಭಾರತದ ಅಥವಾ ಐರೋಪ್ಯ ಲೇಖಕರ ಪ್ರಸ್ತಾಪ ಬಂದಿರಬಹುದು. ಆದರೆ ನಮ್ಮ ಕಾಲದ ಪ್ರಮುಖ ಕನ್ನಡ ಲೇಖಕರಾಗಲೀ ಅಷ್ಟೇಕೆ, ದಕ್ಷಿಣ ಕನ್ನಡದ ಲೇಖಕರೂ ಅವರ ಬರಹದಲ್ಲಿ ಕಾಣಿಸೋದಿಲ್ಲ. ಶಿವರಾಮ ಕಾರಂತರಾಗಲೀ ಗೋವಿಂದ ಪೈಗಳಾಗಲೀ ಇಲ್ಲಿ ಬರುವುದಿಲ್ಲ!

ವ್ಯಾಸರು ಸ್ವಕೇಂದ್ರಿತರಾದ ಲೇಖಕ. ನಮ್ಮಲ್ಲಿ ನವೋದಯ, ಪ್ರಗತಿಶೀಲ, ನವ್ಯ ಇನ್ನಿತರ ಸಾಹಿತ್ಯ ಚಳವಳಿಗಳು ನಡೀತಾ ಇದ್ದರೆ ಅದರ ಪ್ರಭಾವ ವ್ಯಾಸರ ಕತೆಗಳ ಒಳಗೆ ಆಗಿರಬಹುದೇ ಹೊರತು ಹೊರಗಡೆ ಇಲ್ಲ. ದಲಿತ, ಮಹಿಳಾ ಸಾಹಿತ್ಯ ಚಳವಳಿಗಳ ಬಗ್ಗೆ ಏನಾದರೂ ಹೇಳುವುದಿದ್ದರೂ ಕತೆಗಳ ಪಾತ್ರಗಳ ಮೂಲಕವೇ ಅದನ್ನು ಕಾಣಹುದಾಗಿದೆ. ಹಾಗೆ ಹೇಳುವಾಗ ಅದರೊಳಗೇನಾದರೂ ವ್ಯಾಸರು ತಮ್ಮ ಅಭಿಪ್ರಾಯಗಳನ್ನು ಹುದುಗಿಸಿರಬಹುದು ಎಂದು